# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 849 (661)

ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಡಿ.ಎಸ್. ಅರುಣ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 12.12.2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 5 ವರ್ಷಗಳಲ್ಲಿ ಮೇಕ್ ಇನ್ ಇಂಡಿಯಾ ಮತ್ತು ಸ್ಟಾರ್ಟ್‌ಅಪ್ ಇಂಡಿಯಾದ ಜಾರಿ ನಂತರ ಆಗಿರುವ ಪ್ರಗತಿಗಳೇನು; | ಮೇಕ್ ಇನ್ ಇಂಡಿಯಾ ಕಾರ್ಯಕ್ರಮವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ದೇಶದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು 14 ಮುಖ್ಯ ವಲಯಗಳಲ್ಲಿ ಬಂಡವಾಳ ಹೂಡಿಕೆ ಮಾಡಲು ಬರುವ ಕೈಗಾರಿಕೆಗಳಿಗೆ ಉತ್ಪಾದನಾ ಆಧಾರಿತ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಅಂದಾಜು ರೂ.1.95 ಲಕ್ಷ ಕೋಟಿಯನ್ನು ಕೇಂದ್ರ ಸರ್ಕಾರವು ನಿಗಧಿಪಡಿಸಿರುತ್ತದೆ.<br><br>ಈ ಯೋಜನೆಯಿಂದ ದೇಶದಲ್ಲಿ 60 ಲಕ್ಷ ಹೊಸ ಉದ್ಯೋಗಗಳು ಹಾಗೂ ಮುಂದಿನ 5 ವರ್ಷಗಳಲ್ಲಿ ರೂ.30.00 ಲಕ್ಷ ಕೋಟಿ ಉತ್ಪಾದನಾ ಮೌಲ್ಯವನ್ನು ಸಾಧಿಸಲು ಕೇಂದ್ರ ಸರ್ಕಾರವು ಗುರಿಯನ್ನು ಹೊಂದಿರುತ್ತದೆ.<br><br>ಈ ಯೋಜನೆಯಡಿ ಕೆಳಕಂಡ ಉತ್ಪನ್ನಗಳನ್ನು ಉತ್ಪಾದಿಸಲು ಕೇಂದ್ರ ಸರ್ಕಾರವು ಉತ್ತೇಜನಗಳನ್ನು ನೀಡುತ್ತಿದೆ.<br><br>1. Auto Components/Automotive<br>2. Aviation<br>3. Chemicals<br>4. Electronic Systems<br>5. Food Processing<br>6. Medical Devices<br>7. Metals & Mining<br>8. Pharmaceuticals<br>9. Renewable Energy<br>10. Telecom<br>11. Textiles & Apparel<br>12. White Goods<br><br>ಸ್ಟಾರ್ಟ್ ಅಪ್ ಇಂಡಿಯಾ ಯೋಜನೆಯು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದ್ದು, ಕಂಪನಿ ಪ್ರಾರಂಭವಾದ 10 ವರ್ಷದ ಒಳಗಡೆ ಇದ್ದು, ಹೊಸ ಆವಿಷ್ಕಾರವುಳ್ಳ ನಾವಿನ್ಯತೆ ಉತ್ಪನ್ನ/ಪ್ರಕ್ರಿಯೆ/ಸೇವೆ ಇದ್ದಲ್ಲಿ ಹಾಗೂ ಈ ಕಂಪನಿಗಳ ವಾರ್ಷಿಕ ವಹಿವಾಟು 100 ಕೋಟಿ ಒಳಗಡೆ ಇರುವ ಕೈಗಾರಿಕೆಗಳನ್ನು ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆ (DPIIT) ಯು ಸ್ಟಾರ್ಟ್ ಅಪ್ ಇಂಡಿಯಾ ಕೈಗಾರಿಕೆಗಳೆಂದು ಗುರುತಿಸುತ್ತಿದೆ. |

| | | |
|---|---|---|
| | | 1,16,026 ಕಂಪನಿಗಳನ್ನು ಸ್ಟಾರ್ಟ್ ಅಪ್ ಇಂಡಿಯಾ ಕಂಪನಿಗಳೆಂದು ಗುರುತಿಸಿರುತ್ತದೆ. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ ಆಫ್ ಇಂಡಿಯಾ (SIDBI) ಇದುವರೆಗೆ 3,650 ಕಂಪನಿಗಳಿಗೆ ಆರ್ಥಿಕ ಸಹಾಯ ನೀಡಿರುತ್ತದೆ.<br><br>ಇಂತಹ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರವು ಆದಾಯ ತೆರಿಗೆ ಅಧಿನಿಯಮ, ಸೆಕ್ಷನ್ 80 IAC ರಡಿ 3 ವರ್ಷಗಳ ಅವಧಿಗೆ ತೆರಿಗೆ ರಜೆ ನೀಡಲಾಗುತ್ತದೆ. ಇದುವರೆಗೆ ಕೇಂದ್ರ ಸರ್ಕಾರವು 2,977 ಸಂಸ್ಥೆಗಳಿಗೆ ತೆರಿಗೆ ರಜೆ ನೀಡಲಾಗಿರುತ್ತದೆ. |
| ಆ | ಹಂಚಿಕೆ ಮಾಡಿದ ಮತ್ತು ಬಳಸಲಾದ ನಿಧಿಯ ವಿವರಗಳೇನು; | ಮೇಕ್ ಇನ್ ಇಂಡಿಯಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಸದರಿಯವರಿಂದ ಹಂಚಿಕೆ ಮಾಡಲಾದ ವಲಯವಾರು ವಿವರಗಳು ಈ ಕೆಳಕಂಡಂತಿವೆ. |

| ಕ್ರ ಸಂ | ಯೋಜನೆಗಳು | ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 1 | Auto Components/ Automotive | 25,938 |
| 2 | Aviation | 120 |
| 3 | Chemicals | 18,100 |
| 4 | Electronic Systems | 55,645 |
| 5 | Food Processing | 10,900 |
| 6 | Medical Devices | 3,420 |
| 7 | Metals & Mining | 6,322 |
| 8 | Pharmaceuticals | 21,490 |
| 9 | Renewable Energy | 24,000 |
| 10 | Telecom | 12,195 |
| 11 | Textiles & Apparel | 10,683 |
| 12 | White Goods | 6,238 |
| | ಒಟ್ಟು | **1,95,051** |

ಬಳಸಲಾದ ಮಾಹಿತಿಯು ಲಭ್ಯವಿರುವುದಿಲ್ಲ.

* ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿಯನ್ನು ಅಂತರ್ಜಾಲದಿಂದ ಪಡೆಯಲಾಗಿದೆ.

| | | |
|---|---|---|
| ಇ | ನಿರುದ್ಯೋಗಿ ಯುವಕರಿಗೆ ಯೋಜನೆಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆಯೇ? | ನಿರುದ್ಯೋಗಿ ಯುವಕರಿಗೆ ಮುದ್ರಾ ಹಾಗೂ ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಗಳಡಿ ಉದ್ಯೋಗವಕಾಶಗಳನ್ನು ಸೃಷ್ಟಿಸಲಾಗಿದೆ.<br><br>8,67,230 ಫಲಾನುಭವಿಗಳಿಗೆ 4,79,547 ಲಕ್ಷಗಳಷ್ಟು ಸಾಲದ ನೆರವು ನೀಡಿದ್ದು, 9,01,312 ಜನರಿಗೆ ಉದ್ಯೋಗಗಳು ಸೃಜನೆಯಾಗಿದೆ. |

ಸಿಐ 333 ಎಸ್‌ಪಿಐ 2023

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು